ಇಂದು ದಿಃ**01-06-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎನ್ ವಕೀಲರಿಂದ ವಾದಿಗಳ ಪರಃ**

ನಾನು ಬಿ.ಎಸ್ಸಿ ಪದವೀಧರ ಇರುತ್ತೇನೆ. ನನಗೆ ಈ ದಾವೆಯ ಮಾಹಿತಿ ಇದೆ. ನನಗೆ ವಾದಪತ್ರದ ಅಂಶಗಳು ಮತ್ತು ವಾದಿಯರು ವಾದ ಪತ್ರದ ಜೊತೆಗೆ ಹಾಜರುಡಿಸಿರುವ ವಂಶವೃಕ್ಷದ ಬಗ್ಗೆ ಮಾಹಿತಿ ಇರುತ್ತದೆ. ಸಾಕ್ಷಿ ನಾವು ಮತ್ತು ವಾದಿಯರು ಒಟ್ಟು ಕುಟುಂಬದಲ್ಲಿ ಇಲ್ಲ ಎಂದು ಹೇಳುತ್ತಾರೆ. ನಂದಿತಾವರೆ ನಂದೀಶ ತಂದೆ ಕರಿಬಸಯ್ಯ ಎಂದರೆ ನಮ್ಮ ಅಜ್ಜ. ಸದರಿ ಮೂಲಪುರುಷ ನಂದೀಶ ಈತನಿಗೆ ಈರಮ್ಮ, ಗುರುಶಾಂತಯ್ಯ, ಹಾಲಯ್ಯ ಮತ್ತು ಬಸಮ್ಮ ಎಂಬ ಮಕ್ಕಳು ಎಂದರೆ ಸರಿ. ಸಾಕ್ಷಿ ಈರಮ್ಮ ಇವಳ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಈರಮ್ಮ ಇವಳ ಮಕ್ಕಳಾದ ನಂದಿಗೌಡ, ಗದಿಗೆಪ್ಪ, ಶೇಖರಗೌಡ ಮತ್ತು ಬಸಮ್ಮ ತೀರಿಕೊಂಡ ಬಗ್ಗೆ ಮಾಹಿತಿ ಇಲ್ಲ. ನನಗೆ 8 ರಿಂದ 10 ನೇ ಪ್ರತಿವಾದಿಯರ ಪರಿಚಯ ಇಲ್ಲ. ಅದೇ ರೀತಿ 11 ರಿಂದ 15 ನೇ ಪ್ರತಿವಾದಿಯರ ಪರಿಚಯ ಇಲ್ಲ. ನಾನು ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಈರಮ್ಮಳ ವಂಶದ ಬಗ್ಗೆ ತಿಳಿಸಿಲ್ಲ. ಈರಮ್ಮ ಇವಳ ವಾರಸುದಾರರಿಗೆ ದಾವಾ ಆಸ್ತಿಯಲ್ಲಿ ಏನು ಹಕ್ಕು ಇದೆ ಎಂದು ಮಾಹಿತಿ ಇದೇಯಾ ಎಂದರೆ ಸಾಕ್ಷಿ ಆಗಿನ ಕಾಲದಲ್ಲಿ ಕೊಡಬೇಕಾದದನ್ನು ಕೊಟ್ಟಿರುತ್ತಾರೆ, ಈಗ ಕೊಡಬೇಕು ಎಂದು ಕಾನೂನು ಬಂದಿದೆ ಎಂದು ಹೇಳುತ್ತಾರೆ.

ಮೂಲಪುರುಷ ನಂದಿತಾವರೆ ನಂದೀಶ ಈತನ ಹೆಣ್ಣು ಮಕ್ಕಳಾದ ಈರಮ್ಮ ಮತ್ತು ಬಸಮ್ಮ ಇವರಿಗೆ ನಂದೀಶ ಈತನ ಆಸ್ತಿಗಳಲ್ಲಿ ಪಾಲು ಕೊಟ್ಟಿಲ್ಲ ಎಂದರೆ ಸರಿ. ಗುರುಶಾಂತಯ್ಯ ಮತ್ತು ಹಾಲಯ್ಯ ಆಸ್ತಿ ಹಂಚಿಕೊಂಡ ಬಗ್ಗೆ ಯಾವುದೇ

ದಾಖಲೆಯನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಒಂದೇ ಆಸ್ತಿ ಇತ್ತು, ಕ್ರಯಪತ್ರದಲ್ಲಿ ಪಾಲಿನ ಬಗ್ಗೆ ನಮೂದು ಇದೆ ಎಂದು ಹೇಳುತ್ತಾರೆ. ವಾದಿಯರು ವಾದಪತ್ರದ ಜೊತೆಗೆ ಕಾಣಿಸಿದ ವಂಶವೃಕ್ಷ ಸರಿ ಇರುತ್ತದೆ. ದಾವಾ ಆಸ್ತಿಗಳು ಮೂಲತಃ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಮ್ಮ ಅಜ್ಜನ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿಗಳನ್ನು ಹೊರತುಪಡಿಸಿ, ನನ್ನ ಅಜ್ಜನಿಗೆ ಬೇರೆ ಯಾವುದೆ ಆಸ್ತಿಗಳು ಇರಲಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ವಾದಿಗಳ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.